ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ, ಉಡುಪಿ.

ಸಿ.ಸಿಃ 1324/2025
ಚಾ. ಸಾ 01
ಫ್ರಾ.ಸಾ 01

| | | |
|---|---|---|
| ಸಾಕ್ಷಿದಾರರ ಹೆಸರು | | ಲ್ಯಾನೆಟ್ ಸ್ಮಿತಾ ಕರ್ಕಡ |
| ಗಂಡನ ಹೆಸರು | : | ಸ್ಯಾಮುಯಲ್ ಕರ್ಕಡ |
| ವಯಸ್ಸು | : | 48 |
| ಉದ್ಯೋಗ | : | ಉಪನ್ಯಾಸಕಿ |
| ವಾಸಸ್ಥಳ | : | ಕನ್ನರ್ಪಾಡಿ |

ದಿನಾಂಕಃ 01-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಅಭಿಯೋಜಕರಿಂದಃ

ಮೃತ ಸ್ಯಾಮುಯಲ್ ಕರ್ಕಡ ರವರು ನನ್ನ ಯಜಮಾನರು . ನಾವು 17-02-2025 ರಂದು ರಾತ್ರಿ 8.30 ರ ನಂತರ ನಮ್ಮ ದ್ವಿ ಚಕ್ರ ವಾಹನ ಸಂಖ್ಯೆ ಕೆಎ 19 ಹೆಚ್ ಬಿ 1881 ರಲ್ಲಿ ನಮ್ಮ ಮನೆಯಿಂದ ಅಜ್ಜರುಕಾಡಿಗೆ ಹೋಗುತಿದ್ದೆವು . ಸದ್ರಿ ವಾಹನವನ್ನು ನನ್ನ ಯಜಮಾನರಾದ ಸ್ಯಾ ಮುಯಲ್ ಕರ್ಕಡ ಚಲಾಯಿಸುತಿದ್ದರು . ಅಗ್ನಿಶಾಮಕ ಠಾಣೆಯ ಬಳಿ ಅಜ್ಜರುಕಾಡು ಸ್ಟೇಡಿಯಂ ಕಡಕಗೆ ತಿರುಗಿಸಿ ನಾವು ರಸ್ತೆಯ ಬದಿಗೆ ಹೋದಾಗ ಬ್ರಹ್ಮಗಿರಿಯಿಂದ ಕಿನ್ನಿಮುಲ್ಕಿ ಕಡೆಗೆ ದ್ವಿ ಚಕ್ರ ವಾಹನ ವಾಹನ ವೇಗವಾಗಿ ಬಂದು ಡಿಕ್ಕಿಪಡಿಸಿರುತ್ತದೆ . ನಾನು ಡಿಕ್ಕಿಪಡಿಸಿದ ವಾಹನದ ಚಕ್ರವನ್ನು ನೋಡಿರುತ್ತೇನೆ. ಡಿಕ್ಕಿಪಡಿಸಿದ ಪರಿಣಾಮ ನನ್ನ ಯಜಮಾನರಿಗೆ ಗಾಯವಾಗಿ ಜ್ಞಾನ ತಪ್ಪಿ ಬಿದ್ದಿದ್ದರು, ನನಗೆ ಮುಖ ಭಾಗಕ್ಕೆ ಗಾಯವಾಗಿರುತ್ತದೆ . ಡಿಕ್ಕಿಪಡಿಸಿದ ವಾಹನ ಚಾಲಕನಿಗೆ ಗಾಯ ಆಗಿರಬಹುದು ನನಗೆ ಗೊತಿಲ್ಲ . ಅಪಘಾತವಾದಾಗ ರಾತ್ರಿ 8.45 ಆಗಿತ್ತು . ಅಪಘಾತವಾದ ನಂತರ ನನ್ನನ್ನು ಮತ್ತು ಯಜಮಾನರನ್ನು ಉಡುಪಿಯ ಆದರ್ಶ ಆಸ್ಪತ್ರೆ ಗೆ ಚಿಕಿತ್ಸೆಗಾಗಿ ಸ್ಥಳದಲ್ಲಿ ಇದ್ದ ಜನರು ಕರೆದುಕೊಂಡು ಹೋಗಿರುತ್ತಾರೆ . ಆಸ್ಪತ್ರೆಗೆ ಹೋದಾಗ ನನ್ನ ಯಜಮಾನರು ಮೃತಪಟ್ಟಿರುತ್ತಾರೆ ಎಂದು ಪರೀಕ್ಷಿಸಿದ ವೈದ್ಯರು ತಿಳಿಸಿರುತ್ತಾರೆ. ಡಿಕ್ಕಿಪಡಿಸಿದ ವಾಹನದ ಚಾಲಕನ ಹೆಸರು ಪವನ್ ಎಂದು ನಂತರ ಗೊತ್ತಾಯಿತು. ಸದ್ರಿ ವಾಹನದ ಸಂಖ್ಯೆ ಸರಿಯಾಗಿ ನೆನಪಿಲ್ಲ . ಅಪಘಾತ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಕಾರಣ ಆತ ವೇಗವಾಗಿ ಬಂದು ಡಿಕ್ಕಿಪಡಿಸಿರುತ್ತಾನೆ . ನಂತರ ಪೊಲೀಸರು ಮಾರನೇ ದಿನ ಆಸ್ಪತ್ರೆ ಗೆ ಬಂದಿರುತ್ತಾರೆ. ನಾನು

ಹೇಳಿದ ಮೇರೆಗೆ ಚಾಸಾ 3 ರವರು ಬರೆದು ಪೊಲೀಸರಿಗೆ ದೂರು ಕೊಟ್ಟಿರುತ್ತಾರೆ . ಸಾಕ್ಷಿಗೆ ದೂರನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ತನ್ನ ಸಹಿಯನ್ನು ಒಪ್ಪಿಕೊಂಡ ಮೇರೆಗೆ ಸದ್ರಿ ದಾಖಲೆಯನ್ನು ನಿಪಿ1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ಆ ದಿನ ಅಪಘಾತಪಡಿಸಿದ ಮತ್ತೊಂದು ವಾಹನ ಚಾಲಕ ನ್ಯಾಯಲಯದ ಮುಂದೆ ಇರುವ ಆರೋಪಿಯಾಗಿರುತ್ತಾನೆ .

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ಅಪಘಾತ ಕಿನ್ನಿಮೂಲ್ಕಿಯಿಂದ ಬ್ರಹ್ಮಗಿರಿಗೆ ಹೋಗುವ ರಸ್ತೆಯ ಬಲಭಾಗದಲ್ಲಿ ಆಗಿರುತ್ತದೆ. ಕಿನ್ನಿಮೂಲ್ಕಿಯಿಂದ ಬ್ರಹ್ಮಗಿರಿಗೆ ಹೋಗುವ ರಸ್ತೆಯಲ್ಲಿ ಬಹಳಷ್ಟು ವಾಹನಗಳು ಓಡಾಡುತ್ತದೆ ಎಂದರೆ ಸರಿ. ಆ ಸಮಯದಲ್ಲಿ ಯಾವ ವಾಹನಗಳು ಯಾವ ಕಡೆಗೆ ಹೋಗುತಿದ್ದವು ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿ . ಯಾವ ಯಾವ ವಾಹನಗಳು ಎಷ್ಟು ಎಷ್ಟು ವೇಗವಾಗಿ ಹೋಗುತಿದ್ದವು ಎಂದು ನನಗೆ ಈಗ ಹೇಳಲು ಸಾಧ್ಯವಿಲ್ಲ . ಅಪಘಾತವಾದ ನಂತರವೇ ನಮ್ಮ ವಾಹನಕ್ಕೆ ಡಿಕ್ಕಿ ಆಯಿತು ಎಂದು ನಮಗೆ ಗೊತ್ತಾಗಿರುತ್ತದೆ . ಯಾವ ವಾಹನ ಡಿಕ್ಕಿಪಡಿಸಿತು ಎಂದು ಬೇರೆಯವರು ಹೇಳಿದ್ದರಿಂದ ಗೊತ್ತಾಯಿತು ಎಂದರೆ ಸರಿ. ಆರೋಪಿಯ ಹೆಸರನ್ನು ಬೇರೆಯವರು ಹೇಳಿದ ನಂತರವೇ ಗೊತ್ತಾಯಿತು ಎಂದರೆ ಸರಿ . ಬೇರೆಯವರು ಹೇಳಿದ್ದನ್ನು ಬಿಟ್ಟರೇ ಯಾವ ವಾಹನ ಡಿಕ್ಕಿಪಡಿಸಿತು ಮತ್ತು ಯಾರು ಡಿಕ್ಕಿಪಡಿದ್ದಾರೆ ಎಂದು ನನಗೆ ಗೊತ್ತಾಗುತಿರಲಿಲ್ಲ ಎಂದರೆ ಸರಿ. ಪಿರ್ಯಾದಿನಲ್ಲಿ ಆರೋಪಿ ಹೆಸರು ಮತ್ತು ವಾಹನದ ಸಂಖ್ಯೆಯನ್ನು ಬೇರೆಯವರು ಬರೆದಿರುತಾರೆ ಎಂದರೆ ಸರಿ . ಪಿರ್ಯಾದಿನಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯ ಯಾವುದೇ ತಪ್ಪು ಇಲ್ಲದೇ ಇದ್ದರೂ ಕೂಡ ವಿಮಾ ಪರಿಹಾರಕ್ಕಾಗಿ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.